حرمين
رئاسة الشؤون الدينية
بالمسجد الحرام والمسجد النبوي

ಕನ್ನಡ | كنادي | التَّحْذِيرُ مِنْ بِنَاءِ المَسَاجِدِ عَلَى القُبُورِ

# ಸಮಾಧಿಗಳ ಮೇಲೆ ಮಸೀದಿಗಳನ್ನು ನಿರ್ಮಿಸುವುದರ ವಿರುದ್ಧ ಎಚ್ಚರಿಕೆ

ಲೇಖಕರು: ಗೌರವಾನ್ವಿತ ಶೈಖ್
ಅಬ್ದುಲ್ ಅಝೀಝ್ ಬಿನ್ ಅಬ್ದುಲ್ಲಾ ಬಿನ್ ಬಾಝ್

ⓒ **جمعية خدمة المحتوى الإسلامي باللغات ، ١٤٤٧هـ**

بن باز ، عبدالعزيز
التحذير من بناء المساجد على القبور - كنادي. / عبدالعزيز بن باز ؛ جمعية خدمة المحتوى الإسلامي باللغات - ط١. .- الرياض ، ١٤٤٧هـ

١٢ ص ؛ ..سم

**رقم الإيداع: ١٤٤٧/١٨٠٢٧**
**ردمك: ٩٧٨-٦٠٣-٥١٧-٢٧٧-٦**

التَّحْذِيرُ مِنْ بِنَاءِ المَسَاجِدِ
عَلَى القُبُورِ

# ಸಮಾಧಿಗಳ ಮೇಲೆ ಮಸೀದಿಗಳನ್ನು ನಿರ್ಮಿಸುವುದರ ವಿರುದ್ಧ ಎಚ್ಚರಿಕೆ


لِسَمَاحَةِ الشَّيْخِ العَلَّامَةِ

عَبْدِ العَزِيزِ بْنِ عَبْدِ اللهِ بْنِ بَازٍ

رَحِمَهُ اللهُ

ಲೇಖಕರು: ಗೌರವಾನ್ವಿತ ಶೈಖ್
ಅಬ್ದುಲ್ ಅಝೀಝ್ ಬಿನ್ ಅಬ್ದುಲ್ಲಾ ಬಿನ್ ಬಾಝ್

بِسْمِ اللهِ الرَّحْمَنِ الرَّحِيمِ

# ಹತ್ತನೆಯ ಸಂದೇಶ:

# ಸಮಾಧಿಗಳ ಮೇಲೆ ಮಸೀದಿಗಳನ್ನು ನಿರ್ಮಿಸುವುದರ ವಿರುದ್ಧ ಎಚ್ಚರಿಕೆ

ಅಲ್ಲಾಹನ ನಾಮನಿಂದ, ಸರ್ವಸ್ತುತಿಗಳು ಅಲ್ಲಾಹನಿಗೆ. ಅಲ್ಲಾಹನ ಸಂದೇಶವಾಹಕರ ಮೇಲೆ ಶಾಂತಿ ಮತ್ತು ಆಶೀರ್ವಾದಗಳು ವರ್ಷಿಸಲಿ.

ಇನ್ನು ವಿಷಯಕ್ಕೆ ಬರುವುದಾದರೆ: ಇಸ್ಲಾಮೀ ಜ್ಞಾನಗಳ ಸಂಘದ (ರಾಬಿತತುಲ್-ಉಲೂಮಿಲ್-ಇಸ್ಲಾಮಿಯ್ಯ) ಪತ್ರಿಕೆಯ ಮೂರನೇ ಸಂಚಿಕೆಯಲ್ಲಿ 'ತಿಂಗಳ ಮುಸ್ಲಿಂ ಸುದ್ದಿ' ವಿಭಾಗದಲ್ಲಿ ಪ್ರಕಟವಾದ ವಿಷಯವನ್ನು ನಾನು ನೋಡಿದೆನು. ಅದರಲ್ಲಿ, ಜೋರ್ಡಾನಿನಲ್ಲಿರುವ ಇಸ್ಲಾಮೀ ಜ್ಞಾನಗಳ ಸಂಘವು, ಕುರ್‌ಆನ್‌ನಲ್ಲಿ ಉಲ್ಲೇಖಿಸಲಾದ ಅಸ್‌ಹಾಬುಲ್ ಕಹ್ಫ್ (ಗುಹೆಯ ಜನರು) ಮಲಗಿದ್ದರೆಂದು ಹೇಳಲಾಗುವ, ಅರ್ರುಹೈಬ್ ಗ್ರಾಮದಲ್ಲಿ ಇತ್ತೀಚೆಗೆ ಪತ್ತೆಯಾದ ಗುಹೆಯ ಮೇಲೆ ಮಸೀದಿಯನ್ನು ನಿರ್ಮಿಸಲು ಉದ್ದೇಶಿಸಿದೆ ಎಂದು ತಿಳಿಸಲಾಗಿತ್ತು.

ಅಲ್ಲಾಹನ ಮತ್ತು ಅವನ ದಾಸನ ಹಿತಚಿಂತಕನಾಗಿರಬೇಕೆಂಬ ಕರ್ತವ್ಯವನ್ನು

ಗಮನದಲ್ಲಿಟ್ಟುಕೊಂಡು, ಜೋರ್ಡಾನ್‌ನಲ್ಲಿರುವ ಇಸ್ಲಾಮೀ ಜ್ಞಾನಗಳ ಸಂಘಕ್ಕೆ ಈ ಪತ್ರಿಕೆಯಲ್ಲಿಯೇ ಒಂದು ಸಂದೇಶವನ್ನು ನೀಡಲು ನಾನು ನಿರ್ಧರಿಸಿದೆನು. ಉಲ್ಲೇಖಿತ ಗುಹೆಯ ಮೇಲೆ ಮಸೀದಿಯನ್ನು ನಿರ್ಮಿಸುವ ತಮ್ಮ ಉದ್ದೇಶವನ್ನು ಕಾರ್ಯಗತಗೊಳಿಸದಂತೆ ಸಂಘಕ್ಕೆ ಸಲಹೆ ನೀಡುವುದು ಅದರ ಸಾರಾಂಶವಾಗಿದೆ. ಇದಕ್ಕೆ ಕಾರಣವೇನೆಂದರೆ, ಪ್ರವಾದಿಗಳ ಮತ್ತು ಸಜ್ಜನರ ಸಮಾಧಿಗಳ ಮೇಲೆ ಅಥವಾ ಅವರ ಸ್ಮಾರಕಗಳ ಮೇಲೆ ಮಸೀದಿಗಳನ್ನು ನಿರ್ಮಿಸುವುದನ್ನು ಇಸ್ಲಾಮೀ ಶರಿಯತ್ (ಕಾನೂನು) ನಿಷೇಧಿಸಿದೆ, ಅದರ ಬಗ್ಗೆ ಎಚ್ಚರಿಸಿದೆ ಮತ್ತು ಹಾಗೆ ಮಾಡಿದವರನ್ನು ಶಪಿಸಿದೆ. ಏಕೆಂದರೆ ಅದು ಬಹುದೇವಾರಾಧನೆಗೆ (ಶಿರ್ಕ್) ಮತ್ತು ಪ್ರವಾದಿಗಳು ಹಾಗೂ ಸಜ್ಜನರ ವಿಷಯದಲ್ಲಿ ಮಿತಿಮೀರುವುದಕ್ಕೆ ದಾರಿಯಾಗುತ್ತದೆ. ಶರಿಯತ್ ತಂದಿರುವ ವಿಷಯಗಳ ಸತ್ಯತೆಗೆ ವಾಸ್ತವವೇ ಸಾಕ್ಷಿಯಾಗಿದೆ, ಮತ್ತು ಅದು ಅಲ್ಲಾಹನಿಂದ ಬಂದಿದೆ ಎಂಬುದಕ್ಕೆ ಪುರಾವೆಯಾಗಿದೆ. ಅಲ್ಲಾಹನ ಸಂದೇಶವಾಹಕರು (ಸ) ಅಲ್ಲಾಹನಿಂದ ತಂದ ಮತ್ತು ಉಮ್ಮತ್ತಿಗೆ ತಲುಪಿಸಿದ ವಿಷಯಗಳಲ್ಲಿ ಸತ್ಯವಂತರು ಎಂಬುದಕ್ಕೆ ಇದು ಸ್ಪಷ್ಟವಾದ ಪುರಾವೆ ಮತ್ತು ನಿರ್ಣಾಯಕ ವಾದವಾಗಿದೆ. ಇಸ್ಲಾಮೀ ಪ್ರಪಂಚದ ಆಗುಹೋಗುಗಳನ್ನು ಮತ್ತು ಸಮಾಧಿಗಳ ಮೇಲೆ

ಮಸೀದಿಗಳನ್ನು ನಿರ್ಮಿಸುವುದು, ಅವುಗಳನ್ನು ಪೂಜ್ಯಭಾವದಿಂದ ಕಾಣುವುದು, ಅಲಂಕರಿಸುವುದು, ಸುಂದರಗೊಳಿಸುವುದು ಮತ್ತು ಅವುಗಳಿಗೆ ಪೂಜಾರಿಗಳನ್ನು ನೇಮಿಸುವುದು ಮುಂತಾದವುಗಳಿಂದ ಉಂಟಾಗಿರುವ ಶಿರ್ಕ್ ಮತ್ತು ಮಿತಿಮೀರುವಿಕೆಯನ್ನು ಗಮನಿಸುವವರಿಗೆ, ಇದು ಶಿರ್ಕ್‌ನ ಕಡೆಗೆ ಒಯ್ಯುವ ಸಾಧನಗಳಲ್ಲಿ ಒಂದೆಂದು ಖಚಿತವಾಗಿ ತಿಳಿಯುತ್ತದೆ. ಇವುಗಳನ್ನು ನಿಷೇಧಿಸುವುದು ಮತ್ತು ಇವುಗಳ ಬಗ್ಗೆ ಎಚ್ಚರಿಕೆ ನೀಡುವುದು ಇಸ್ಲಾಮೀ ಶರಿಯತ್‌ನ ಸೌಂದರ್ಯಗಳಲ್ಲಿ ಒಂದಾಗಿದೆ.

ಈ ಕುರಿತು ಬಂದಿರುವ ವರದಿಗಳಲ್ಲಿ ಒಂದು ಹೀಗಿದೆ: ಬುಖಾರಿ ಮತ್ತು ಮುಸ್ಲಿಂ (ಅಲ್ಲಾಹು ಅವರಿಬ್ಬರ ಮೇಲೆ ಕರುಣೆ ತೋರಲಿ) ಆಯಿಷಾ (ರ) ರಿಂದ ವರದಿ ಮಾಡಿದ್ದಾರೆ. ಅಲ್ಲಾಹನ ಸಂದೇಶವಾಹಕರು (ಸ) ಹೇಳಿದರು:

«لَعَنَ اللَّهُ الْيَهُودَ وَالنَّصَارَى، اتَّخَذُوا قُبُورَ أَنْبِيَائِهِمْ مَسَاجِدَ، قالَتْ عَائِشَةُ: يُحَذِّرُ مَا صَنَعُوا، قالَتْ: وَلَوْلَا ذَلِكَ لَأُبْرِزَ قَبْرُهُ، غَيْرَ أَنَّهُ خُشِيَ أَنْ يُتَّخَذَ مَسْجِدًا».

"ಅಲ್ಲಾಹು ಯಹೂದಿಗಳು ಮತ್ತು ಕ್ರಿಶ್ಚಿಯನ್ನರನ್ನು ಶಪಿಸಲಿ, ಅವರು ತಮ್ಮ ಪ್ರವಾದಿಗಳ ಸಮಾಧಿಗಳನ್ನು ಮಸೀದಿಗಳಾಗಿ (ಆರಾಧನಾ ಸ್ಥಳಗಳಾಗಿ) ಮಾಡಿಕೊಂಡರು." ಆಯಿಷಾ (ರ) ಹೇಳುತ್ತಾರೆ: "ಅವರು ಮಾಡಿದ್ದನ್ನು (ಮಾಡಬಾರದೆಂದು) ಪ್ರವಾದಿ(ಸ) ರವರು ಎಚ್ಚರಿಸುತ್ತಿದ್ದರು."

ಅವರು (ಆಯಿಷಾ) ಮುಂದುವರಿಸಿದರು: "ಹಾಗಲ್ಲದಿದ್ದರೆ, ಅವರ (ಪ್ರವಾದಿಯ) ಸಮಾಧಿಯನ್ನು ಹೊರಗೆ ಎದ್ದು ಕಾಣುವಂತೆ ಮಾಡಲಾಗುತ್ತಿತ್ತು. ಆದರೆ ಅದನ್ನು (ಜನರು) ಮಸೀದಿಯಾಗಿ ಮಾಡಿಕೊಳ್ಳಬಹುದೆಂಬ ಭಯವಿತ್ತು." ಬುಖಾರಿ ಮತ್ತು ಮುಸ್ಲಿಂ ನಲ್ಲಿರುವ ಇನ್ನೊಂದು ಹದೀಸ್ ಹೀಗಿದೆ: ಉಮ್ಮು ಸಲಮಾ (ರ) ಮತ್ತು ಉಮ್ಮು ಹಬೀಬಾ (ರ) ರವರು ಅಬಿಸ್ಸೀನಿಯಾದಲ್ಲಿ ತಾವು ನೋಡಿದ ಒಂದು ಚರ್ಚ್ ಮತ್ತು ಅದರಲ್ಲಿನ ಚಿತ್ರಗಳ ಬಗ್ಗೆ ಅಲ್ಲಾಹನ ಸಂದೇಶವಾಹಕರಿಗೆ (ಸ) ತಿಳಿಸಿದರು. ಆಗ ಅವರು (ಸ) ಹೇಳಿದರು:

«أُولَئِكَ إِذَا مَاتَ فِيهِمُ الرَّجُلُ الصَّالِحُ؛ بَنَوْا عَلَى قَبْرِهِ مَسْجِدًا، وَصَوَّرُوا فِيهِ تِلْكَ الصُّوَرَ، أُولَئِكَ شِرَارُ الْخَلْقِ عِنْدَ اللَّهِ».

"ಆ ಜನರು, ಅವರಲ್ಲಿ ಒಬ್ಬ ಸಜ್ಜನ ವ್ಯಕ್ತಿ ಮರಣಹೊಂದಿದರೆ; ಅವನ ಸಮಾಧಿಯ ಮೇಲೆ ಮಸೀದಿಯನ್ನು ನಿರ್ಮಿಸುತ್ತಿದ್ದರು ಮತ್ತು ಅದರಲ್ಲಿ ಆ ಚಿತ್ರಗಳನ್ನು ರಚಿಸುತ್ತಿದ್ದರು. ಅವರು ಅಲ್ಲಾಹನ ದೃಷ್ಟಿಯಲ್ಲಿ ಅತ್ಯಂತ ಕೆಟ್ಟ ಸೃಷ್ಟಿಗಳು."

ಸಹೀಹ್ ಮುಸ್ಲಿಂನಲ್ಲಿ ಜುಂದುಬ್ ಬಿನ್ ಅಬ್ದುಲ್ಲಾ (ರ) ರಿಂದ ವರದಿ. ಅವರು ಹೇಳಿದರು: ನಾನು ಅಲ್ಲಾಹನ ಸಂದೇಶವಾಹಕರು (ಸ) ತಮ್ಮ ಮರಣಕ್ಕೆ ಐದು ದಿನಗಳ

ಮೊದಲು ಹೀಗೆ ಹೇಳುವುದನ್ನು ಕೇಳಿದೆ:

«إِنِّي أَبْرَأُ إِلَى اللَّهِ أَنْ يَكُونَ لِي مِنْكُمْ خَلِيلٌ، فَإِنَّ اللَّهَ قَدِ اتَّخَذَنِي خَلِيلًا، كَمَا اتَّخَذَ إِبْرَاهِيمَ خَلِيلًا، وَلَوْ كُنْتُ مُتَّخِذًا مِنْ أُمَّتِي خَلِيلًا، لَاتَّخَذْتُ أَبَا بَكْرٍ خَلِيلًا، أَلَا وَإِنَّ مَنْ كَانَ قَبْلَكُمْ كَانُوا يَتَّخِذُونَ قُبُورَ أَنْبِيَائِهِمْ وَصَالِحِيهِمْ مَسَاجِدَ، أَلَا فَلَا تَتَّخِذُوا الْقُبُورَ مَسَاجِدَ، فَإِنِّي أَنْهَاكُمْ عَنْ ذَلِكَ».

"ನಾನು ನಿಮ್ಮಲ್ಲಿ ಯಾರನ್ನಾದರೂ ನನ್ನ ಖಲೀಲ್ (ಆಪ್ತಮಿತ್ರ) ಆಗಿ ಮಾಡಿಕೊಳ್ಳುವುದರಿಂದ ಅಲ್ಲಾಹನ ಮುಂದೆ ಮುಕ್ತತೆಯನ್ನು ಘೋಷಿಸುತ್ತೇನೆ. ಖಂಡಿತವಾಗಿಯೂ ಅಲ್ಲಾಹು ಇಬ್ರಾಹೀಮ್ (ಅ) ರನ್ನು ಖಲೀಲ್ ಆಗಿ ಮಾಡಿಕೊಂಡಂತೆ ನನ್ನನ್ನೂ ಖಲೀಲ್ ಆಗಿ ಮಾಡಿಕೊಂಡಿದ್ದಾನೆ. ಒಂದು ವೇಳೆ ನಾನು ನನ್ನ ಉಮ್ಮತ್ತಿನಿಂದ ಯಾರನ್ನಾದರೂ ಖಲೀಲ್ ಆಗಿ ಮಾಡಿಕೊಳ್ಳುವುದಾಗಿದ್ದರೆ, ಅಬೂಬಕರ್ (ರ) ರನ್ನು ಖಲೀಲ್ ಆಗಿ ಮಾಡಿಕೊಳ್ಳುತ್ತಿದ್ದೆ. ತಿಳಿಯಿರಿ, ನಿಮ್ಮ ಹಿಂದಿನ ಸಮುದಾಯದವರು ತಮ್ಮ ಪ್ರವಾದಿಗಳ ಮತ್ತು ಸಜ್ಜನರ ಸಮಾಧಿಗಳನ್ನು ಮಸೀದಿಗಳಾಗಿ ಮಾಡಿಕೊಳ್ಳುತ್ತಿದ್ದರು. ಆದ್ದರಿಂದ, ಸಮಾಧಿಗಳನ್ನು ಮಸೀದಿಗಳಾಗಿ ಮಾಡಿಕೊಳ್ಳಬೇಡಿ; ನಾನು ನಿಮಗೆ ಅದನ್ನು ನಿಷೇಧಿಸುತ್ತೇನೆ." ಈ ಅರ್ಥದಲ್ಲಿ ಇನ್ನೂ ಅನೇಕ ಹದೀಸ್‌ಗಳಿವೆ.

ಸಮಾಧಿಗಳ ಮೇಲೆ ಮಸೀದಿಗಳನ್ನು ನಿರ್ಮಿಸುವುದನ್ನು

ನಾಲ್ಕು ಮಝ್‌ಹಬ್‌ಗಳ ವಿದ್ವಾಂಸರು ಹಾಗೂ ಇತರ ಮುಸ್ಲಿಂ ವಿದ್ವಾಂಸರು ನಿಷೇಧಿಸಿದ್ದಾರೆ ಮತ್ತು ಅದರ ಬಗ್ಗೆ ಎಚ್ಚರಿಸಿದ್ದಾರೆ. ಪ್ರವಾದಿಯವರ (ಸ) ಸುನ್ನತ್ತನ್ನು ಅನುಸರಿಸುವ, ಉಮ್ಮತ್ತಿಗೆ ಉಪದೇಶ ನೀಡುವ ಮತ್ತು ಯಹೂದಿಗಳು, ಕ್ರಿಶ್ಚಿಯನ್ನರು ಹಾಗೂ ಈ ಉಮ್ಮತ್ತಿನ ದುರ್ಮಾರ್ಗಿಗಳು ತಲುಪಿದಂತಹ ಸ್ಥಿತಿಗೆ ತಲುಪದಂತೆ ಅವರನ್ನು ಎಚ್ಚರಿಸುವ ಉದ್ದೇಶದಿಂದ ಅವರು ಹೀಗೆ ಮಾಡಿದ್ದಾರೆ.

ಆದ್ದರಿಂದ, ಸುನ್ನತ್ತನ್ನು ಅನುಸರಿಸುವುದು, ಇಮಾಮರ ಮಾರ್ಗದಲ್ಲಿ ನಡೆಯುವುದು ಮತ್ತು ಅಲ್ಲಾಹು ಹಾಗೂ ಅವನ ಸಂದೇಶವಾಹಕರು (ಸ) ಎಚ್ಚರಿಸಿದ ವಿಷಯಗಳಿಂದ ದೂರವಿರುವುದು ಜೋರ್ಡಾನ್‌ನಲ್ಲಿರುವ ಇಸ್ಲಾಮೀ ಜ್ಞಾನಗಳ ಸಂಘದ ಮೇಲೆ ಮತ್ತು ಇತರ ಮುಸ್ಲಿಮರ ಮೇಲೆ ಕಡ್ಡಾಯವಾಗಿದೆ; ಇದರಲ್ಲಿಯೇ ದಾಸರ ಒಳಿತು, ಅವರ ಸಂತೋಷ ಮತ್ತು ಇಹಲೋಕ ಹಾಗೂ ಪರಲೋಕದಲ್ಲಿ ಅವರ ಮೋಕ್ಷವು ಅಡಗಿದೆ. ಕೆಲವು ಜನರು ಈ ವಿಷಯದಲ್ಲಿ, ಗುಹಾವಾಸಿಗಳ ಕಥೆಯಲ್ಲಿ ಅಲ್ಲಾಹು ಹೇಳಿರುವ ಈ ಮಾತನ್ನು ಆಧಾರವಾಗಿ ಮಾಡಿಕೊಳ್ಳುತ್ತಾರೆ:

﴿...قَالَ ٱلَّذِينَ غَلَبُواْ عَلَىٰٓ أَمۡرِهِمۡ لَنَتَّخِذَنَّ عَلَيۡهِم مَّسۡجِدًا﴾

ಅವರ ವಿಷಯದಲ್ಲಿ ಪ್ರಾಬಲ್ಯ ಪಡೆದವರು ಹೇಳಿದರು:

"ನಿಶ್ಚಯವಾಗಿಯೂ ನಾವು ಅವರ ಗುಹೆಯ ಬಳಿ ಒಂದು ಮಸೀದಿಯನ್ನು ನಿರ್ಮಿಸುತ್ತೇವೆ." [ಅಲ್-ಕಹ್ಫ್: 21]

ಇದಕ್ಕೆ ಉತ್ತರವೇನೆಂದರೆ: ಅಲ್ಲಾಹು ಆ ಕಾಲದ ಮುಖಂಡರು ಮತ್ತು ಅಧಿಕಾರದಲ್ಲಿದ್ದವರು ಈ ಮಾತನ್ನು ಹೇಳಿದರು ಎಂದು ತಿಳಿಸಿದ್ದಾನೆ. ಇದು ಅವರು ಮಾಡಿದ ಕೆಲಸವನ್ನು ಒಪ್ಪಿಕೊಳ್ಳುವ ಅಥವಾ ಅನುಮೋದಿಸುವ ರೀತಿಯಲ್ಲಿಲ್ಲ. ಬದಲಿಗೆ ಅವರು ಮಾಡಿದ ಕೆಲಸವನ್ನು ಖಂಡಿಸುವ, ದೂಷಿಸುವ ಮತ್ತು ಅದರಿಂದ ದೂರವಿರಲು ಪ್ರೇರೇಪಿಸುವ ರೀತಿಯಲ್ಲಿದೆ. ಇದಕ್ಕೆ ಪುರಾವೆಯೇನೆಂದರೆ: ಈ ಆಯತ್ತನ್ನು ಯಾರಿಗೆ ಅವತೀರ್ಣಗೊಳಿಸಲಾಯಿತೋ, ಮತ್ತು ಯಾರು ಅದರ ವ್ಯಾಖ್ಯಾನವನ್ನು ಎಲ್ಲರಿಗಿಂತ ಚೆನ್ನಾಗಿ ತಿಳಿದಿದ್ದರೋ ಆ ಸಂದೇಶವಾಹಕರು (ಸ) ತಮ್ಮ ಉಮ್ಮತ್ತಿಗೆ ಸಮಾಧಿಗಳ ಮೇಲೆ ಮಸೀದಿಗಳನ್ನು ನಿರ್ಮಿಸುವುದನ್ನು ನಿಷೇಧಿಸಿದ್ದಾರೆ, ಅದರ ಬಗ್ಗೆ ಎಚ್ಚರಿಸಿದ್ದಾರೆ ಮತ್ತು ಹಾಗೆ ಮಾಡಿದವರನ್ನು ಶಪಿಸಿದ್ದಾರೆ ಹಾಗೂ ಖಂಡಿಸಿದ್ದಾರೆ.

ಒಂದು ವೇಳೆ ಅದು ಅನುಮತಿಸಲ್ಪಟ್ಟಿದ್ದರೆ, ಅಲ್ಲಾಹನ ಸಂದೇಶವಾಹಕರು (ಸ) ಈ ವಿಷಯದಲ್ಲಿ ಇಷ್ಟು ಕಠಿಣವಾದ ನಿಲುವನ್ನು ತಾಳುತ್ತಿರಲಿಲ್ಲ, ಮತ್ತು ಹಾಗೆ ಮಾಡಿದವರನ್ನು ಶಪಿಸಿ, ಅವರು ಅಲ್ಲಾಹನ ದೃಷ್ಟಿಯಲ್ಲಿ ಅತ್ಯಂತ ಕೆಟ್ಟ ಸೃಷ್ಟಿಗಳು ಎಂದು ಹೇಳುವಷ್ಟು ತೀವ್ರವಾಗಿ

ವಿರೋಧಿಸುತ್ತಿರಲಿಲ್ಲ. ಸತ್ಯಾನ್ವೇಷಿಗೆ ಇದರಲ್ಲಿ ಸಾಕಷ್ಟು ಮತ್ತು ಮನವರಿಕೆಯಾಗುವಷ್ಟು ಪುರಾವೆಯಿದೆ. ಒಂದು ವೇಳೆ ನಾವು ಸಮಾಧಿಗಳ ಮೇಲೆ ಮಸೀದಿಗಳನ್ನು ನಿರ್ಮಿಸುವುದು ನಮ್ಮ ಹಿಂದಿನ ಸಮುದಾಯದವರಿಗೆ ಅನುಮತಿಸಲ್ಪಟ್ಟಿತ್ತು ಎಂದು ಭಾವಿಸಿದರೂ, ಆ ವಿಷಯದಲ್ಲಿ ಅವರನ್ನು ಅನುಕರಿಸಲು ನಮಗೆ ಅನುಮತಿಯಿಲ್ಲ. ಏಕೆಂದರೆ ನಮ್ಮ ಶರಿಯತ್ ಹಿಂದಿನ ಶರಿಯತ್‌ಗಳನ್ನು ರದ್ದುಗೊಳಿಸುತ್ತದೆ. ನಮ್ಮ ಸಂದೇಶವಾಹಕರು (ಸ) ಎಲ್ಲಾ ಪ್ರವಾದಿಗಳ ಮುದ್ರೆಯಾಗಿದ್ದಾರೆ ಮತ್ತು ಅವರು ತಂದ ಶರಿಯತ್ ಸಂಪೂರ್ಣ ಮತ್ತು ಸಾರ್ವತ್ರಿಕವಾಗಿದೆ. ಅವರು ಸಮಾಧಿಗಳ ಮೇಲೆ ಮಸೀದಿಗಳನ್ನು ನಿರ್ಮಿಸುವುದನ್ನು ನಮಗೆ ನಿಷೇಧಿಸಿದ್ದಾರೆ. ಆದ್ದರಿಂದ ಅವರ ಮಾತಿಗೆ ವಿರುದ್ಧವಾಗಿ ನಡೆಯಲು ನಮಗೆ ಅನುಮತಿಯಿಲ್ಲ. ಅವರನ್ನು ಅನುಸರಿಸುವುದು, ಅವರು ತಂದಿರುವುದನ್ನು ಬಿಗಿಯಾಗಿ ಹಿಡಿದುಕೊಳ್ಳುವುದು ಮತ್ತು ಹಳೆಯ ಶರಿಯತ್‌ಗಳಲ್ಲಿ ಇದಕ್ಕೆ ವಿರುದ್ಧವಾಗಿರುವುದನ್ನು ಅಥವಾ ಅದನ್ನು ಮಾಡಿದವರು ಉತ್ತಮವೆಂದು ಪರಿಗಣಿಸಿದ ಪದ್ಧತಿಗಳನ್ನು ತ್ಯಜಿಸುವುದು ನಮ್ಮ ಮೇಲೆ ಕಡ್ಡಾಯವಾಗಿದೆ. ಏಕೆಂದರೆ ಅಲ್ಲಾಹನ ನಿಯಮಕ್ಕಿಂತ ಪರಿಪೂರ್ಣವಾದುದು ಯಾವುದೂ ಇಲ್ಲ, ಮತ್ತು ಅಲ್ಲಾಹನ ಸಂದೇಶವಾಹಕರ (ಸ)

ಮಾರ್ಗದರ್ಶನಕ್ಕಿಂತ ಉತ್ತಮವಾದ ಮಾರ್ಗದರ್ಶನ ಯಾವುದೂ ಇಲ್ಲ.

ಅಲ್ಲಾಹನನ್ನು ಭೇಟಿಯಾಗುವವರೆಗೂ ಅವನ ಧರ್ಮದಲ್ಲಿ ದೃಢವಾಗಿ ನಿಲ್ಲಲು ಮತ್ತು ಮಾತುಗಳಲ್ಲಿ, ಕಾರ್ಯಗಳಲ್ಲಿ, ಬಾಹ್ಯ ಮತ್ತು ಆಂತರಿಕ ವಿಷಯಗಳಲ್ಲಿ ಹಾಗೂ ಇತರ ಎಲ್ಲಾ ವ್ಯವಹಾರಗಳಲ್ಲಿ ಅವನ ಸಂದೇಶವಾಹಕರಾದ ಮುಹಮ್ಮದ್ (ಸ) ರವರ ಮಾರ್ಗದರ್ಶನವನ್ನು ಅನುಸರಿಸಲು ಅಲ್ಲಾಹು ನಮಗೂ, ಎಲ್ಲಾ ಮುಸ್ಲಿಮರಿಗೂ ತೌಫೀಕ್ ನೀಡಲಿ ಎಂದು ನಾವು ಅಲ್ಲಾಹನಲ್ಲಿ ಪ್ರಾರ್ಥಿಸುತ್ತೇವೆ. ಖಂಡಿತವಾಗಿಯೂ ಅವನು ಕೇಳುವವನು ಮತ್ತು ಹತ್ತಿರವಿರುವವನಾಗಿದ್ದಾನೆ.

ಅಲ್ಲಾಹನ ಶಾಂತಿ ಮತ್ತು ಶುಭಾಶೀರ್ವಾದಗಳು ಅವನ ದಾಸರು ಮತ್ತು ಸಂದೇಶವಾಹಕರಾದ, ನಮ್ಮ ಪ್ರವಾದಿ ಮುಹಮ್ಮದ್(ಸ) ರವರ ಮೇಲೆ, ಅವರ ಕುಟುಂಬದ ಮೇಲೆ, ಅವರ ಸಹಚರರ ಮೇಲೆ ಹಾಗೂ ಪುನರುತ್ಥಾನ ದಿನದವರೆಗೆ ಅವರ ಮಾರ್ಗದರ್ಶನವನ್ನು ಅನುಸರಿಸುವವರ ಮೇಲೆ ಇರಲಿ.

***

kn397v4.0 - 16/02/2026

رئاسة الشؤون الدينية
بالمسجد الحرام والمسجد النبوي

رسالة الحرمين

# Message of The Two Holy Mosques

Guidance content for the visitors of the Holy Mosque and the Prophet's Mosque in languages

978-603-517-277-6